# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸಿರುವ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ"ಗಳಡಿಯಲ್ಲಿ 'ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ' ಸೇವೆಯನ್ನು ಒದಗಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂ: ಎಫ್‌ಸಿಎಸ್ 35 ಸೆಇಸಿವ್ಯೆ 2017, ದಿನಾಂಕ: 06.10.2017.
2. ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂ: ಎಫ್‌ಸಿಎಸ್ 374 ಡಿಆರ್‌ಎ 2017, ದಿನಾಂಕ: 25.11.2017.

******

**ಪ್ರಸ್ತಾವನೆ :**

ಗ್ರಾಮೀಣ ಜನತೆಯು ತಮ್ಮ ಸಾಮಾಜಿಕ, ಶೈಕ್ಷಣಿಕ, ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗಾಗಿ ವಿವಿಧ ಇಲಾಖೆಗಳಿಂದ ಹಲವಾರು ದಾಖಲೆಗಳನ್ನು ಪಡೆಯುವ ಅಗತ್ಯವಿರುತ್ತದೆ. ಈ ದಾಖಲೆಗಳನ್ನು ತ್ವರಿತವಾಗಿ ಮತ್ತು ಸಮೀಪವಾಗಿ ಪಡೆದುಕೊಳ್ಳಲು ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸಲು ನಿರ್ಧರಿಸಿದ್ದು, ಪ್ರಾಥಮಿಕ ಹಂತದಲ್ಲಿ ಗ್ರಾಅಪ ಇಲಾಖೆಯ G2C 43 ಸೇವೆಗಳು, ಕಂದಾಯ ಇಲಾಖೆಯ G2C 40 ಸೇವೆಗಳು ಹಾಗೂ ಇನ್ನಿತರ B2C 17 ಸೇವೆಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ನೀಡಲಾಗುವುದು.

ಮೇಲೆ ಓದಲಾದ (1) ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಆನ್‌ಲೈನ್ ಸೇವೆಗಳ ಜೊತೆಗೆ "ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ" ಸೇವೆಯನ್ನು ಸೇರ್ಪಡೆಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ (2) ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ "ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ" ಸೇವೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸಿರುವ ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಪ್ರಸ್ತುತ ಒದಗಿಸಲಾಗುತ್ತಿರುವ ಸೇವೆಗಳ ಜೊತೆಗೆ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ "ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ" ಸೇವೆಯನ್ನು ಸೇರ್ಪಡೆಗೊಳಿಸಿ ಸಾರ್ವಜನಿಕರಿಗೆ ತ್ವರಿತವಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರವು ಉದ್ದೇಶಿಸಿದೆ. ಅದರಂತೆ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/09/ಗ.ಕೋಶ/2017, ಬೆಂಗಳೂರು, ದಿನಾಂಕ: 11.12.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯತಿಗಳು ಪಂಚತಂತ್ರ ತಂತ್ರಾಂಶದ ಮೂಲಕ ಈಗಾಗಲೇ ಸಾರ್ವಜನಿಕರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 43 G2C ಸೇವೆಗಳು, ಕಂದಾಯ ಇಲಾಖೆಯ 40 G2C ಸೇವೆಗಳು ಹಾಗೂ ಇನ್ನಿತರ B2C 17 ಸೇವೆಗಳು ಸೇರಿದಂತೆ ಒಟ್ಟು 100 ಸೇವೆಗಳ ಜೊತೆಗೆ **ಅನುಬಂಧ** ದಲ್ಲಿ ನಮೂದಿಸಿರುವಂತೆ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ "ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ" ಸೇವೆಯನ್ನು ಸೇರ್ಪಡೆ ಮಾಡಲು ಸರ್ಕಾರವು ಆದೇಶಿಸಿದೆ.

...2

ಪ್ರತಿ ಕೋರಿಕೆಗೆ ನಿಗದಿಗೊಳಿಸಲಾಗಿರುವ ಸೇವಾಶುಲ್ಕ ರೂ. 50/– ಗಳನ್ನು ಗ್ರಾಮ ಪಂಚಾಯತಿಗಳು ಈಗಾಗಲೇ ತೆರೆದಿರುವ ಬಾಪೂಜಿ ಸೇವಾ ಕೇಂದ್ರಗಳ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡುವುದು. ಸದರಿ ಸೇವಾ ಶುಲ್ಕದ ಮೊತ್ತವನ್ನು ಗ್ರಾಮ ಪಂಚಾಯತಿಗಳು ಆಡಳಿತಾತ್ಮಕ ವೆಚ್ಚ ಹಾಗೂ ಇನ್ನಿತರೆ ವೆಚ್ಚಗಳಿಗೆ ನಿಯಮಾನುಸಾರ ಬಳಸಿಕೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

12/12/17

(ಕೆ.ಯಾಲಕ್ಕಿಗೌಡ)
ನಿರ್ದೇಶಕರು(ಇ–ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು, ಕೆ.ಆರ್.ವೃತ್ತ, ಬೆಂಗಳೂರು.
5. ಗ್ರಾಅಪ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪಕಾರ್ಯದರ್ಶಿಗಳು/ಮುಖ್ಯ ಲೆಕ್ಕಾಧಿಕಾರಿ/ಮುಖ್ಯ ಯೋಜನಾಧಿಕಾರಿ/ ಯೋಜನಾ ನಿರ್ದೇಶಕರುಗಳು.
8. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
9. ತಹಶೀಲ್ದಾರ್, ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳು.
10. ಎಲ್ಲಾ ನಾಡ ಕಛೇರಿಗಳು, ಕಂದಾಯ ಇಲಾಖೆ (ಸಂಬಂಧಿಸಿದ ತಹಶೀಲ್ದಾರ್ ಮೂಲಕ)
11. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.
12. ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
13. ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.
14. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ.

# ಅನುಬಂಧ

**43 G2C RDPR Online Services**

| Sl.No | Services Name | Services names in Kannada |
|---|---|---|
| 1 | Issuence of Building permission-Residential(New/Addl/Mod) | ಕಟ್ಟಡ ಅನುಮತಿ ವಿತರಣೆ-ವಸತಿ (ಹೊಸ/ಹೆಚ್ಚುವರಿ/ಬದಲಾವಣೆ) |
| 2 | Issuence of Building permission-Commercial (New/Addl/Mod) | ಕಟ್ಟಡ ಅನುಮತಿ ವಿತರಣೆ-ವಾಣಿಜ್ಯ (ಹೊಸ/ಹೆಚ್ಚುವರಿ/ಬದಲಾವಣೆ) |
| 3 | Issuence of Alteration to Assessment List(Mutation) | ತೆರಿಗೆ ನಿರ್ಧಾರಣಾ ಪಟ್ಟಿ ವಿತರಣೆ |
| 4 | Copy of Demand/ Assessment List (Existing) | ಬೇಡಿಕೆ/ಕಂದಾಯ ನಕಲು ಪಟ್ಟಿ |
| 5 | Application to waive off property tax | ಆಸ್ತಿ ತೆರಿಗೆ ಮನ್ನಾ ಅರ್ಜಿ |
| 6 | Issuance for Building Completion Certificate | ಕಟ್ಟಡ ಕಾಮಗಾರಿಯ ಮುಕ್ತಾಯ ಪ್ರಮಾಣ ಪತ್ರ ವಿತರಣೆ |
| 7 | .Application for new Water connection | ಹೊಸ ನೀರಿನ ಸಂಪರ್ಕಕ್ಕಾಗಿ ಅರ್ಜಿ |
| 8 | Application for Disconnecting Water Connection | ನೀರಿನ ಸಂಪರ್ಕ ಕಡಿತ |
| 9 | Intimation of Digging of Borewells | ಕೊಳವೆ ಬಾವಿ ನಿರ್ಮಾಣದ ವಿವರ ತಿಳಿಸುವುದು |
| 10 | Intimation to Closure of Borewells | ಕೊಳವೆ ಬಾವಿ ನಿರ್ಮಾಣ ಮುಕ್ತಾಯ |
| 11 | Issuances of NOC for ESCOMS | ESCOMS ಆಕ್ಷೇಪಣೆ ರಹಿತ ಪತ್ರ ವಿತರಣೆ |
| 12 | Application requesting for skill based equipments like tailoring machines etc (To Place before GramaSabha) | ಹೊಲಿಗೆ ಯಂತ್ರಗಳು ಇತ್ಯಾದಿ ರೀತಿಯ ಕೌಶಲ್ಯ ಆಧಾರಿತ ಉಪಕರಣಗಳಿಗೆ ಮನವಿ |
| 13 | Application under SCP/TSP Schemes (Subsidy for cattle feed/cattle shed) (To place before GramaSabha) | ಎಸ್.ಸಿ.ಪಿ ಯೋಜನೆಗಳ ಅರ್ಜಿ (ಜಾನುವಾರು ಆಹಾರ ಸಬ್ಸಿಡಿ, ಜಾನುವಾರು) |
| 14 | Application for availing housing scheme (To place before GramaSabha) | ವಸತಿ ಯೋಜನೆ ಪಡೆಯಲು ಅರ್ಜಿ |
| 15 | Application for getting free-sites (To place before GramaSabha) | ಉಚಿತ ನಿವೇಶನ ಪಡೆಯಲು ಅರ್ಜಿ |
| 16 | Application for SBM ( To Place before Grama Sabha) | ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮ ಅರ್ಜಿ |
| 17 | Application for Bio-gas | ಜೈವಿಕ ಅನಿಲ ಅರ್ಜಿ |
| 18 | No Due Certificate from Gram Panchayat | ಗ್ರಾಮ ಪಂಚಾಯತಿಗಳಿಂದ NDC |
| 19 | Application under Rajeev Gandhi Chaithanya Yojana ( To Place before GramaSabha) | ರಾಜೀವ್ ಗಾಂಧಿ ಉದ್ಯೋಗ ಯೋಜನೆ ಅರ್ಜಿ |
| 20 | Issuance of Providing employment to unskilled labours under MGNREGA scheme | ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೌಶಲ್ಯ ರಹಿತ ಕೆಲಸಗಾರರಿಗೆ ಉದ್ಯೋಗ ಒದಗಿಸುವುದು. |
| 21 | Issuance of job card for unskilled labours under MGNREGA | ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೌಶಲ್ಯ ರಹಿತ ಕೆಲಸಗಾರರಿಗೆ ಜಾಬ್ ಕಾರ್ಡ್ ವಿತರಣೆ |
| 22 | Payment of residential property tax | ವಸತಿ ಆಸ್ತಿ ತೆರಿಗೆ ಪಾವತಿ |
| 23 | Payment of Commercial property tax | ವಾಣಿಜ್ಯ ಆಸ್ತಿ ತೆರಿಗೆ ಪಾವತಿ |
| 24 | Payment of water charges | ನೀರಿನ ಶುಲ್ಕ ಪಾವತಿ |
| 25 | Application for New Street Lights in Existing Lines | ಅಸ್ತಿತ್ವದಲ್ಲಿರುವ ಮಾರ್ಗಗಳಲ್ಲಿ ಹೊಸ ಬೀದಿದೀಪಗಳಿಗೆ ಅರ್ಜಿ |
| 26 | NOC to Land Conversion | ಭೂ ಪರಿವರ್ತನೆ ಗೆ ನಿರಾಪೇಕ್ಷಣ ಪತ್ರ ವಿತರಣೆ |
| 27 | Payment of Rent on GP Assets | ಗ್ರಾಮ ಪಂಚಾಯತಿ ಆಸ್ತಿಗಳ ಬಾಡಿಗೆ ಪಾವತಿ |
| 28 | NOC to Other Authorities/Departments | ಇತರ ಇಲಾಖೆಗಳಿಗೆ ನಿರಾಪೇಕ್ಷಣ ಪ್ರಮಾಣಪತ್ರ ವಿತರಣೆ |
| 29 | e-payment for the work executed under developmental schemes | ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಕಾರ್ಯಗತಗೊಳಿಸಿದ ಕೆಲಸಕ್ಕೆ ಇ-ಪಾವತಿ |
| 30 | Issuance of Trade license (Hotels and Shops) | ವ್ಯಾಪಾರ ಪರವಾನಗಿ ವಿತರಣೆ (ಹೊಟೇಲ್ ಮತ್ತು ಅಂಗಡಿ) |
| 31 | Issuance of NOC to Factories | ಕಾರ್ಖಾನೆಗಳಿಗೆ ನಿರಾಪೇಕ್ಷಣಾ ಪತ್ರ ವಿತರಣೆ |
| 32 | Issuance of Advertisement license | ಜಾಹೀರಾತು ಪರವಾನಗಿ ವಿತರಣೆ |
| 33 | NOC to Entertainment activities | ಮನರಂಜನಾ ಕಾರ್ಯಕ್ರಮಗಳಿಗೆ ನಿರಾಪೇಕ್ಷಣಾ ಪತ್ರ |
| 34 | Renewal of trade license (Hotel and Shops) | ವ್ಯಾಪಾರ ಪರವಾನಗಿ ನವೀಕರಣ (ಹೊಟೇಲ್ ಮತ್ತು ಅಂಗಡಿ) |
| 35 | Application to avail service under 25% SC and ST GP welfare fund | 25% ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ |
| 36 | Renewal of Advertisement license | ಜಾಹೀರಾತು ಪರವಾನಗಿ ನವೀಕರಣ |
| 37 | Application to avail services under 3% Physically Handicapped | 3% ಅಂಗವಿಕಲರ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ |
| 38 | Maintainance of Drinking Water (Minor Repairs) | ಕುಡಿಯುವ ನೀರಿನ ನಿರ್ವಹಣೆ |
| 39 | Maintanence of Street Light (Minor Repairs) | ಬೀದಿ ದೀಪಗಳ ನಿರ್ವಹಣೆ (ಸಣ್ಣ ರಿಪೇರಿ) |
| 40 | Maintanace of Village sanitation (Minor Repairs) | ಗ್ರಾಮ ನೈರ್ಮಲ್ಯ ನಿರ್ವಹಣೆ |

| | | |
|---|---|---|
| 41 | Issuance of records (population, crop,cattle census, BPL list) | ದಾಖಲೆಗಳ ವಿತರಣೆ (ಜನಸಂಖ್ಯೆ, ಬೆಳೆ, ಜಾನುವಾರು ಗಣತಿ, ಬಿಪಿಎಲ್ ಪಟ್ಟಿ) |
| 42 | Application to avail services under 2%Sports Services | 2% ಕ್ರೀಡೆ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ |
| 43 | Issuance of Distance Certificate for School/College Students/Others | ವಿದ್ಯಾರ್ಥಿ/ಇತರರಿಗೆ ದೂರ ಪ್ರಮಾಣ ಪತ್ರ ವಿತರಣೆ |

**39 G2C Nada Kacheri Services of Revenue Department**

| Sl. No. | Services Name | Services names in Kannada |
|---|---|---|
| 1 | Population Certificate | ಜನಸಂಖ್ಯೆ ದೃಢೀಕರಣ ಪತ್ರ |
| 2 | Caste and Income Certficate | ಜಾತಿ ಮತ್ತು ಆದಾಯ ದೃಢೀಕರಣ ಪತ್ರ |
| 3 | Caste Certificate (Cat-A) | ಹಿಂದುಳಿದ ವರ್ಗಗಳ ಪ್ರಮಾಣ ಪತ್ರ (ಪ್ರವರ್ಗ–1) |
| 4 | Caste Certificate (SC/ST) | ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಪ್ರಮಾಣ ಪತ್ರ (ಪ.ಜಾ/ಪ.ಪಂ) |
| 5 | OBC Certificate (Central) | ಇತರೆ ಹಿಂದುಳಿದ ವರ್ಗಗಳ ದೃಢೀಕರಣ ಪತ್ರ (ಕೇಂದ್ರ) |
| 6 | Residence Certificate | ವಾಸಸ್ಥಳ ದೃಢೀಕರಣ ಪತ್ರ |
| 7 | Income Certificate | ಆದಾಯ ದೃಢೀಕರಣ ಪತ್ರ |
| 8 | Non Tenancy Certificate | ಗೇಣಿ ರಹಿತ ದೃಢೀಕರಣ ಪತ್ರ |
| 9 | Widow Certificate | ವಿಧವಾ ದೃಢೀಕರಣ ಪತ್ರ |
| 10 | Living Certificate | ಜೀವಂತ ದೃಢೀಕರಣ ಪತ್ರ |
| 11 | Agricultural Family member certificate | ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ |
| 12 | No Re-Marriage Certificate | ಮರು ವಿವಾಹವಾಗದಿರುವ ದೃಢೀಕರಣ ಪತ್ರ |
| 13 | Land less Certificate | ಜಮೀನು ಇಲ್ಲದಿರುವ ದೃಢೀಕರಣ ಪತ್ರ |
| 14 | Surviving Family Members Certificate | ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ |
| 15 | Unemployment Certificate | ನಿರುದ್ಯೋಗಿ ದೃಢೀಕರಣ ಪತ್ರ |
| 16 | No Govt. Job Certificate | ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ |
| 17 | Agriculturist Certificate | ವ್ಯವಸಾಯಗಾರರ ದೃಢೀಕರಣ ಪತ್ರ |
| 18 | Small / Marginal farmer Certificate | ಸಣ್ಣ/ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ |
| 19 | Agricultural Labour Certficate | ಕೃಷಿ ಕಾರ್ಮಿಕ ದೃಢೀಕರಣ ಪತ್ರ |
| 20 | Non creamy layer Certificate | ಮೇಲುಸ್ತರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ |
| 21 | Land holding Certificate | ಭೂ ಹಿಡುವಳಿ ಪ್ರಮಾಣ ಪತ್ರ |
| 22 | Bonafide Certificate | ಬೋನಫೈಡ್ ದೃಢೀಕರಣ ಪತ್ರ |
| 23 | Solvency Certificate | ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ |
| 24 | Domicile Certificate | ವಸತಿ ದೃಢೀಕರಣ ಪತ್ರ |
| 25 | Income Certificate for Employment | ಉದ್ಯೋಗದ ಉದ್ದೇಶಕ್ಕೆ ಆದಾಯ ದೃಢೀಕರಣ ಪತ್ರ |
| 26 | Income Certificate for compass for Employment | ಅನುಕಂಪದ ಆಧಾರದದ ನೇಮಕಾತಿಗೆ ಆದಾಯ ದೃಢೀಕರಣ ಪತ್ರ |
| 27 | Attestation of Family Tree | ವಂಶವೃಕ್ಷದ ದೃಢೀಕರಣ ಪತ್ರ |
| 28 | HK Region Residence and Eligibility | ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಸತಿ & ಅರ್ಹತಾ ದೃಢೀಕರಣ ಪತ್ರ |
| 29 | Crop Certificate | ಬೆಳೆ ದೃಢೀಕರಣ ಪತ್ರ |
| 30 | Physically Handicapped Pension | ಅಂಗವಿಕಲರ ವೇತನ |
| 31 | Widow Pension | ವಿಧವಾ ವೇತನ |
| 32 | Sandhya Suraksha Yojane | ಸಂಧ್ಯಾ ಸುರಕ್ಷಾ |
| 33 | National Family Benefit Scheme | ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆ |
| 34 | Indira Gandhi National Old Age Pension | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ |
| 35 | Mythiri | ಮೈತ್ರಿ |
| 36 | Manaswini | ಮನಸ್ವಿನಿ |

| | | |
|---|---|---|
| 37 | thya Samskara Yojane | ಅಂತ್ಯ ಸಂಸ್ಕಾರ ಯೋಜನೆ |
| 38 | Acid Victim Pention | ಆಸಿಡ್ ದಾಳಿಗೊಳಗಾದವರಿಗೆ ಪಿಂಚಣಿ |
| 39 | Farmer Widow Pension | ರೈತರ ವಿಧವೆಯರ ಪಿಂಚಣಿ |

**Bhoomi G2C Services of revenue Department**

| Sl.No | Services name | Services names in Kannada |
|---|---|---|
| 1 | RTC | ಪಹಣಿ ಪ್ರತಿ |

**Food, Civil Supplies and Consumer Affairs Department**

| Sl.No | Services name | Services names in Kannada |
|---|---|---|
| 1 | Chief Minister Anila Bhagya Yojane | ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ |

**17 Others B2C Services**

| Sl.No | Services name | Services names in Kannada |
|---|---|---|
| 1 | Electricity Bill | ವಿದ್ಯುತ್ ಬಿಲ್ |
| 2 | Landline bill | ದೂರವಾಣಿ ಬಿಲ್ |
| 3 | Life Insurance | ಜೀವ ವಿಮೆ |
| 4 | Vehicle insurance | ವಾಹನ ವಿಮೆ |
| 5 | Mobile recharge | ಮೊಬೈಲ್ ರೀಚಾರ್ಜ್ |
| 6 | DTH Recharge | ಡಿಟಿಎಚ್ ರೀಚಾರ್ಜ್ |
| 7 | Data card recharge | ಡೇಟಾ ಕಾರ್ಡ್ ರೀಚಾರ್ಜ್ |
| 8 | Bus ticket booking | ಬಸ್ ಟಿಕೆಟ್ ಬುಕಿಂಗ್ |
| 9 | Railway ticket booking | ರೈಲ್ವೆ ಟಿಕೆಟ್ ಬುಕಿಂಗ್ |
| 10 | Air ticket booking | ಏರ್ ಟಿಕೆಟ್ ಬುಕಿಂಗ್ |
| 11 | Aadhaar(View/Modification) | ಆಧಾರ್ (ವೀಕ್ಷಿಸಿ / ಮಾರ್ಪಾಡು) |
| 12 | Voter ID (View/Modification0 | ಮತದಾರರ ಗುರುತಿನ ಚೀಟಿ (ವೀಕ್ಷಿಸಿ /ಮಾರ್ಪಾಡು) |
| 13 | Ration card(Application) | ಪಡಿತರ ಚೀಟಿ (ಅಪ್ಲಿಕೇಶನ್) |
| 14 | Job Information (Application) | ಜಾಬ್ ಮಾಹಿತಿ (ಅಪ್ಲಿಕೇಶನ್) |
| 15 | Fund Transfer | ಹಣ ವರ್ಗಾವಣೆ |
| 16 | Scholarship | ವಿದ್ಯಾರ್ಥಿವೇತನ |
| 17 | Licence fee | ಪರವಾನಗಿಯ ಶುಲ್ಕ |